ಈ) ಅಭಾವ ಪರಿಹಾರ ಕಾಮಗಾರಿಗಳನ್ನು ನಡೆಸುವ ಬೇಳೆ, ಮೇಲ್ವಿಚಾರಣೆ ನೋಡಿಕೊಳ್ಳಲು ಅಧಿಕಾರಿಗಳ ಒಂದು ಕಾವಲು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಪೂರ್ವಭಾವಿ ಮಾಹಿತಿಯಲ್ಲದೇ ಹಟಾತ್ ತಪಾಸಣೆಯನ್ನು ಮಾಡಿ ಕೆಲಸ ಕಾರ್ಯಗಳ ವೀಕ್ಷಣೆ ಮಾಡುವ ವ್ಯವಸ್ಥೆ ಇದೆ. ಇದಲ್ಲದೆ, ಜಿಲ್ಲಾಧಿಕಾರಿ, ವಿಶೇಷ ಜಿಲ್ಲಾಧಿಕಾರಿಗಳು, ಸಹಾಯಕ ಜಿಲ್ಲಾಧಿಕಾರಿಗಳು ಕಾರ್ಯನಿರ್ವಾಹಕ ಅಭಿಯಂತರರು, ಸೂಪರಿಂಟೆಂಡಿಂಗ್ ಅಭಿಯಂತರರು, ಅಭಿವೃದ್ಧಿ ಸಹಾಯಕರು, ಆಗಿಂದಾಗ್ಗೆ ಪರಿಹಾರ ಕಾಮಗಾರಿಗಳನ್ನು ತಪಾಸಣೆ ನಡೆಸುತ್ತಾರೆ, ಇದರ ಜೊತೆಗೆ ಅನೇಕ ಶಾಸಕರು ಭೇಟಿ ನೀಡಿ ಪರಿಹಾರ ಕಾಮಗಾರಿಗಳ ಪ್ರಗತಿಯನ್ನು ನೋಡುತ್ತಿರುತ್ತಾರೆ. ಅದಲ್ಲದೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು ಸಹ ಕೆಲವು ತಾಲ್ಲೂಕುಗಳ ಕಾಮಗಾರಿಗಳನ್ನು ಪರೀಕ್ಷಿಸಲು ಅನಿರೀಕ್ಷಿತವಾಗಿ ಭೇಟಿ ಮಾಡಿದ್ದಾರೆ.

ಶ್ರೀ ಕೆ. ಬಿ. ಕೋಳಿವಾಡ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನನ್ನ (೧) ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳು ಇವೆ. ಪ್ರತಿಯೊಂದು ತಾಲ್ಲೂಕಿನಲ್ಲಿರುವಂತಹ ಹಳ್ಳಿಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಮತ್ತು ಪ್ರತಿಯೊಂದು ತಾಲ್ಲೂಕಿಗೆ ಒದಗಿಸಿಕೊಟ್ಟಿರುವ ಹಣದ ಮೊಬಲಗನ್ನು ಸಹ ಹೇಳಿದ್ದಾರೆ. ಆದರೆ ನಮ್ಮ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಸುಮಾರು ೧೦೦ ಹಳ್ಳಿಗಳು ಇವೆ. ಇಲ್ಲಿಗೆ ಸುಮಾರು ೭.೯೧ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದೇ ರೀತಿ ಹಾವೇರಿ ತಾಲ್ಲೂಕಿನಲ್ಲಿ ಸುಮಾರು ೮೬ ಹಳ್ಳಿಗಳು ಇದ್ದು ಅಲ್ಲಿಗೆ ಸುಮಾರು ೮.೫೫ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶಿರಟ್ಟಿ ತಾಲ್ಲೂಕಿನಲ್ಲಿ ೭೬ ಹಳ್ಳಿಗಳು ಮಾತ್ರ ಇದ್ದು ಅಲ್ಲಿಗೆ ಸುಮಾರು ೯.೭೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಸವದತ್ತಿ ತಾಲ್ಲೂಕಿನಲ್ಲಿ ಸುಮಾರು ೬೨ ಹಳ್ಳಿಗಳು ಇದ್ದು ೮.೩೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ರಾಣೆಬೆನ್ನೂರು ತಾಲೂಕಿನಲ್ಲಿ ೧೦೦ ಹಳ್ಳಿಗಳು ಇದ್ದರೂ ಸಹ ಕಡಿಮೆ ಹಣವನ್ನು ಕೊಟ್ಟಿದ್ದೀರಿ. ಇದರಿಂದ ನನಗನಿಸುತ್ತದೆ ತಾವು ಪಾರ್ಟಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹಣವನ್ನು ಬಿಡುಗಡೆ ಏನಾದರೂ ಮಾಡಿದ್ದೀರೋ ಏನೋ ಎಂದು, ಇನ್ನು ಎರಡನೆಯದಾಗಿ ಸುಮಾರು ೧೦-೧೨ ದಿವಸಗಳಿಂದ ಒಂದು ಫೈಸೆ ಕೆಲಸ ಕೂಡ ನಡೆಯುತ್ತಿಲ್ಲ. ಯಾವುದೇ ಇಲಾಖೆಯಲ್ಲಿ ಕೇಳಿದರೂ ಸಹ ಹಣ ವಿಲ್ಲವೆಂದು ಹೇಳುತ್ತಿದ್ದಾರೆ. ಜನ ಅಲ್ಲಿ ಕೆಲಸವಿಲ್ಲದೆ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಆದಷ್ಟು ಬೇಗ ಅಲ್ಲಿಗೆ ಹಣ ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡಿಸುತ್ತೀರಾ? ಮೂರನೆಯದಾಗಿ ತಾವು ಅನೇಕ ಕೆಲಸ ಕಾರ್ಯಗಳನ್ನು ಒಪ್ಪಿಸಿದ್ದೀರಿ. ಆ ಬಗ್ಗೆ ಸರಿಯಾದ ಸೂಪರ್‌ವೈಜ್ ಕೆಲಸ ನಡೆಯುತ್ತಿದೆಯೇ ಅಥವಾ ಇಲ್ಲವೆ? ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ. ಹಣ ಪೋಲಾಗುತ್ತಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಪಕ್ಷಗಳ ವಿಚಾರ ಇಲ್ಲ. ಈಗ ಗದಗ ತಾಲ್ಲೂಕಿನಲ್ಲಿ ಕೇವಲ ೫೪ ಹಳ್ಳಿಗಳು ಮಾತ್ರ ಇವೆ. ಅಲ್ಲಿಗೆ ಸುಮಾರು ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದೇ ರೀತಿಯಲ್ಲಿ ನವಲಗುಂದ ತಾಲ್ಲೂಕಿನಲ್ಲಿ ೮೨ ಹಳ್ಳಿಗಳು ಮಾತ್ರ ಇವೆ. ಅಲ್ಲಿಗೆ ಸುಮಾರು ೮ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಾವು ಜನಸಂಖ್ಯಾ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡುತ್ತೇವೆ. ಜನತಾ ಪಕ್ಷದ ಸದಸ್ಯರಲ್ಲದೆ ಇರುವಂತಹ ಕಡೆಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದೇವೆ ಈಗ ಪರಿಹಾರ ಕಾಮಗಾರಿಗಳಿಗಾಗಿ ೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಆಗ ರಾಣೆಬೆನ್ನೂರು ತಾಲ್ಲೂಕಿಗೂ ಸೂಕ್ತ ರೀತಿಯಲ್ಲಿ ಹಣ ಬಿಡುಗಡೆ ಮಾಡುವ ಆಶ್ವಾಸನೆ ಕೊಡುತ್ತೇನೆ.

## ಶಿವಮೊಗ್ಗ ತಾಲ್ಲೂಕಿನಲ್ಲಿ ಸಾಗುವಳಿಗೆ ಯೋಗ್ಯವಾದ ಕಂದಾಯ ಜಮೀನಿನ ಲಭ್ಯವಿರುವ ಬಗ್ಗೆ

೬೫೩. ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ವಿತರಣೆ ಮಾಡಲು ಸಾಗುವಳಿಗೆ ಯೋಗ್ಯವಾದ ಕಂದಾಯ ಜಮೀನಿನ ವಿಸ್ತೀರ್ಣವೆಷ್ಟು?

ಅ) ಸದರೀ ಜಮೀನು ಇರುವ ಹಳ್ಳಿಗಳು, ಸರ್ವೆ ನಂಬರುಗಳು ಮತ್ತು ವಿಸ್ತೀರ್ಣವೆಷ್ಟು?

ಇ) ಸದರೀ ಜಮೀನುಗಳನ್ನು ಆದಷ್ಟು ಬೇಗನೆ ವಿತರಣೆ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನ ಮಂತ್ರಿಗಳು).—

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ವಿತರಣೆ ಮಾಡಲು ಸಾಗುವಳಿಗೆ ಯೋಗ್ಯವಾದ ಸರ್ಕಾರಿ ಕಂದಾಯ ಜಮೀನು ಯಾವುದೂ ಲಭ್ಯವಿರುವುದಿಲ್ಲ.

ಆ) ಉಪಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಉಪಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ (ಅ) ಪ್ರಶ್ನೆಗೆ ಇಲ್ಲವೆಂದು ಮತ್ತು (ಆ) ಪ್ರಶ್ನೆಗೆ ಉತ್ತರದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಸ್ವಾಮಿ ಮಾನ್ಯ ಮಂತ್ರಿಗಳಿಗೆ ಇಲಾಖೆಯಿಂದ ತಪ್ಪು ಮಾಹಿತಿ ಬಂದಂತಿದೆ. ಶಾಸಕನಾಗಿ ನನಗೆ ಗೊತ್ತಿದೆ. ಅಲ್ಲಿ ಸಾವಿರಾರು ಜನರು ಕಾಯುತ್ತಿದ್ದಾರೆ. ಅಲ್ಲಿ ಒಂದು ಎಕರೆ ಭೂಮಿ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯನ್ನು ತಡೆಹಿಡಿದು ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಪಾಪ ಅವರಿಗೆ ಸರಿಯಾದ ಮಾಹಿತಿ ಇಲಾಖೆಯವರು ಒದಗಿಸಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಇಲ್ಲ ಎಂದು ಉತ್ತರ ಹೇಳುವುದಕ್ಕೆ ಇಷ್ಟೇ ಕಾರಣ. ಅಲ್ಲಿ ಯಾವುದೂ ರೆವಿನ್ಯೂ ಲ್ಯಾಂಡ್ಸ್ ಇಲ್ಲ. ಇರುವಂತಹ ಭೂಮಿಯಲ್ಲಿ ಅತಿಕ್ರಮವಾಗಿದೆ. ಅತಿಕ್ರಮ ಮಾಡಿಕೊಂಡಿರುವ ಜನರನ್ನೇ ರೆಗ್ಯುಲರೈಜ್ ಮಾಡ ಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದಷ್ಟು ಬೇಗ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ಹೇಳಿದರು ಅತಿಕ್ರಮ ಮಾಡಿಕೊಂಡಿದ್ದಾರೆಂದು ಎಷ್ಟು ಜನ ಅತಿಕ್ರಮ ಮಾಡಿಕೊಂಡಿದ್ದಾರೆ? ರೆಗ್ಯುಲರೈಜ್ ಮಾಡುವುದಕ್ಕೆ ಈಗಾಗಲೇ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಆ ಬಗ್ಗೆ ಸದ್ಯಕ್ಕೆ ನನ್ನಲ್ಲಿ ವಿವರ ಇಲ್ಲ. ಅತಿಕ್ರಮ ಮಾಡಿಕೊಂಡಿರುವವರ ಬಗ್ಗೆ ಒಂದು ನಿರ್ಧಾರವನ್ನು ಮಾಡಿ ನಿಯಮಗಳನ್ನು ಮಾಡು ತ್ತಿದ್ದೇವೆ. ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಸ್ವಾಮಿ ಇದರಲ್ಲಿ ಕೆಲವು ಅರಣ್ಯ ಭೂಮಿ ಕೂಡ ಸೇರಿದೆ. ಆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೆಗ್ಯುಲರೈಜ್ ಮಾಡುವಾಗ ಈ ಸಮಸ್ಯೆ ಬರುತ್ತದೆ. ಅದಕ್ಕಾಗಿ ನಾವು ಕೆಲವು ಸಿ ಅಂಡ್ ಡಿ ಲ್ಯಾಂಡ್‌ಗಳನ್ನು ಕ್ಲಾಸಿಫಿಕೇಶನ್ ಮಾಡಿ ಯಾವ ಯಾವ ಜಮೀನುಗಳು ಅರಣ್ಯ ಇಲಾಖೆಗೆ ಸೇರುತ್ತದೆ, ಯಾವ ಯಾವ ಜಮೀನುಗಳು ರೆವಿನ್ಯೂ ಇಲಾಖೆಗೆ ಸೇರುತ್ತದೆಂದು ತಿಳಿದುಕೊಂಡು ಬೇರೆ ಬೇರೆ ಮಾಡಿದ್ದೇವೆ. ನಾನು ಪೊನ್ನೆ ದಿವಸ ಶಿವಮೊಗ್ಗ ಜಿಲ್ಲೆ ಇನ್ನಿತರ ಬೇರೆ ಬೇರೆ ಜಿಲ್ಲೆಗಳಿಗೆ ಪ್ರವಾಸ ಹೋದಾಗ ಈ ವಿಷಯ ನನ್ನ ಗಮನಕ್ಕೆ ಬಂತು. ಮತ್ತೆ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಹೇಳಿದ ಹಾಗೆ ಅವರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಮರ ಗಳನ್ನು ಕಡಿದು ೭-೮ ಪಟಗಳನ್ನು ಕಟ್ಟಿದ್ದಾರೆ. ಇವೆಲ್ಲದರ ಬಗ್ಗೆ ಆಲೋಚನೆ ಮಾಡಿ ಒಂದು ಸೂಕ್ತ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

## ಬೆಳಗಾಂ ಜಿಲ್ಲೆಯಲ್ಲಿ ಅಭಾವ ಕಾವಂಗಾರಿಕೆಗಳಿಗೆ ವೆಚ್ಚ ಮಾಡಲಾದ ಮೊಬಲಗು

೧೦೦೯. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಕಂದಾಯ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ೧೯೮೫ರ ಜೂನ್ ತಿಂಗಳಲ್ಲಿ ಬೈಲಹೊಂಗಲ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ ಪರಿಹಾರ ಕಾವಂಗಾರಿಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು?